ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ

ಸಿಸಿಃ **37/2019**

ಸಿ.ಡಬ್ಲೂಃ **15** ಪಿಡಬ್ಲ್ಯೂಃ **3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗೋಪಾಲಕೃಷ್ಣ |
| ತಂದೆಯ ಹೆಸರು | ಃ | ಜಿ.ನಾರಾಯಣ್ |
| ವಯಸ್ಸು | ಃ | **62** ವರ್ಷ |
| ಉದ್ಯೋಗ | ಃ | ನಿವೃತ್ತ ಪಿ.ಎಸ್.ಐ. |
| ವಾಸಸ್ಥಳ | ಃ | ಆದಿ ಉಡುಪಿ, ಉಡುಪಿ. |

ಸಾಕ್ಷಿಯ ಸಾಕ್ಷ್ಯವನ್ನು ದ.ಪ್ರ.ಸಂ. **299** ರಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ.

ದಿಃ **13.01.2023** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸರಕಾರಿ ಅಭಿಯೋಜಕರಿಂದಃ

ನಾನು ಮಣಿಪಾಲ ಪೋಲೀಸ್ ಠಾಣೆಯಲ್ಲಿ ಏಪ್ರಿಲ್ **2016** ರಿಂದ ಜುಲೈ **2017** ರ ತನಕ ಪೋಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ **26.04.2016** ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಎ.ಎಸ್.ಐ. ಆನಂದ್ ರವರು ನೀಡಿದ ಠಾಣಾ. ಅ.ಕ್ರ.ನಂಬ್ರ **130/2016** ಐಪಿಸಿ ಕಲಂ **457,380** ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ ನಡೆಸಿದ ತನಿಖೆ ಸರಿಯಾಗಿದೆ ಎಂದು ಮನಗಂಡು ಸದ್ರಿ ಪ್ರಕರಣದಲ್ಲಿ ತಕ್ಷೀರು ಸ್ದ.ಳ ಮಹಜರ್ ಹೇಳಿ ಸ್ವಾಧೀನಪಡಿಸಿಕೊಂಡ ಸ್ಟೀಲ್ ಡಬ್ಬದಲ್ಲಿ ಅವಕಾಶಿತ ಬೆರಳು ಮುದ್ರೆಗಳು ಇದ್ದಲ್ಲಿ ಅದನ್ನು ಸಂಗ್ರಹಿಸಿ ವರದಿ ನೀಡುವಂತೆ ಪೋಲೀಸ್ ಉಪನಿರೀಕ್ಷಕರು ಬೆರಳು ಮುದ್ರೆ ಘಟಕ ಇವರಿಗೆ ಕೋರಿಕೆ ಪತ್ರವನ್ನು ಹೆಚ್.ಸಿ.**2111** ನಾಗೇಶ್ ರವರಲ್ಲಿ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ. ತನಿಖೆಯನ್ನು ಮುಂದುವರೆಸಿ ದಿನಾಂಕ **27.04.2016** ರಂದು ಠಾಣಾ ಪ್ರಕರಣ **127/2016** ಕಲಂ **457,380** ಐಪಿಸಿ ಪ್ರಕರಣದಲ್ಲಿ ಆಪಾದಿತರುಗಳಾದ **1.** ಮೋಹನ ಯಾನೆ ಮಧು, **2.** ಗಂಗಾಧರ, **3.** ನಾರಾಯಣಸ್ವಾಮಿ, **4.** ಶ್ರೀನಿವಾಸ ಇವರುಗಳನ್ನು ದಸ್ತಗಿರಿ ಮಾಡಿದ್ದು ಈ ಪ್ರಕರಣ ಫಿರ್ಯಾದುದಾರರಾದ ವಿಶ್ವನಾಥ ಹಾಗೂ ಸಾಕ್ಷಿದಾರರಾದ ಕುಮಾರಿ ಚೈತ್ರ, **2.** ಅಭಿಷೇಕ್, ಇವರುಗಳನ್ನು ಠಾಣೆಗೆ ಕರೆಸಿ ಆಪಾದಿತರನ್ನು ಗುರುತಿಸಲಾಯಿತು. ಅಲ್ಲದೇ ಇವರುಗಳ ಮರುಹೇಳಿಕೆಗಳನ್ನು ಪಡೆಯಲಾಯಿತು. ಹಾಗೂ

ಠಾಣಾ ಅ.ಕ್ರ.**127/2016** ರ ಸ್ವತ್ತು ಸ್ವಾಧೀನತಾ ಮಹಜರ್, ಆಪಾದಿತರ ದಸ್ತಗಿರಿ ಮಹಜರ್, ಆರೋಪಿತರ ಖಬುಲಾತಿ ಹೇಳಿಕೆ ಮತ್ತು ಆಪಾದಿತರುಗಳು ತೋರಿಸಿಕೊಟ್ಟಂತೆ ತಯಾರಿಸಿದ ಮಹಜರ್ ನ ಪ್ರತಿಯನ್ನು ಈ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ತನಿಖೆ ಮುಂದುವರೆಸಿ ದಿನಾಂಕ **28.04.2016** ರಂದು ಫಿರ್ಯಾದಿದಾರರ ಅಂಗಡಿ ಕಳವು ಮಾಡಿದ ಆರೋಪಿಗಳಾದ **1.** ಮೋಹನ ಯಾನೆ ಮಧು, **2.** ಗಂಗಾಧರ, **3.** ನಾರಾಯಣಸ್ವಾಮಿ, **4.** ಶ್ರೀನಿವಾಸ ಇವರುಗಳನ್ನು ಠಾಣಾ ಅ.ಕ್ರ.**127/2016** ರ ಪ್ರಕರಣದ ಐಪಿಸಿ **457,380** ಪ್ರಕರಣದ ದಸ್ತಗಿರಿ ಮಾಡಿದ್ದು ಈ ಪ್ರಕರಣದ ಫಿರ್ಯಾದುದಾರರ ಅಂಗಡಿಯಿಂದ ಕಳವು ಮಾಡಿದ ರೂ.**17,500/-** ಗಳನ್ನು ಆಪಾದಿತರುಗಳು ಹಂಚಿಕೊಂಡು, ಖರ್ಚಾಗಿ ಉಳಿದ ನಗದು ಹಣ ರೂ. **7,500/-** ನ್ನು ಈ ಪ್ರಕರಣಕ್ಕೆ ವರ್ಗಾಯಿಸುವಂತೆ ಕೋರಿ ಠಾಣಾ ಸ್ವತ್ತು ಪಟ್ಟಿ **78/2016** ರಲ್ಲಿ ನಮೂದಿಸಿ ಈ ಪ್ರಕರಣದಲ್ಲಿ ಸ್ವತ್ತು ಸ್ವಾಧೀನತಾ ಮಹಜರ್ ಮತ್ತು ಸ್ವತ್ತು ಪಟ್ಟಿ ನಂಬ್ರ **74/2016** ರ ಪ್ರತಿಯನ್ನು ಲಗತ್ತಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಲ್ಲದೇ ಆಪಾದಿತರುಗಳಿಗೆ ಬಾಡಿ ವಾರೆಂಟ್ ನ್ನು ಸಲ್ಲಿಸುವಂತೆ ಜಿಲ್ಲಾ ಕಾರಾಗೃಹಕ್ಕೆ ಫೋನ್ ಕರೆ ಮಾಡಿ ಆಪಾದಿತರುಗಳ ಯು.ಟಿ.ಪಿ. ನಂಬ್ರ ವಿಚಾರಿಸಿರುತ್ತೇನೆ.

ತನಿಖೆ ಮುಂದುವರೆಸಿ ದಿನಾಂಕ **29.04.2016** ರಂದು ಸದ್ರಿ ಆಪಾದಿತರ ಯು.ಟಿ.ಪಿ. ನಂಬ್ರಗಳನ್ನು ಪಡೆದುಕೊಂಡು ಈ **4** ಜನ ಆರೋಪಿಗಳು ಈ ಪ್ರಕರಣದಲ್ಲಿ ಶಾಮೀಲಾಗಿದ್ದರಿಂದ ಅವರುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ಬಾಡಿ ವಾರೆಂಟ್ ಗಾಗಿ ಮನವಿ ಸಲ್ಲಿಸಿರುತ್ತೇನೆ. ದಿನಾಂಕ **30.04.2016** ಕ್ಕೆ ಬಾಡಿ ವಾರೆಂಟ್ ಲಭ್ಯವಾಗಿದ್ದು. ದಿನಾಂಕ **11.05.2016** ಕ್ಕೆ ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಆದೇಶವಾಗಿದ್ದು ಅದನ್ನು ಕಾರಾಗೃಹಕ್ಕೆ ಮಾಹಿತಿಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ **12.05.2016** ರಂದು ಆರೋಪಿಗಳಿಗೆ ಮಾನ್ಯ ನ್ಯಾಯಾಲಯವು ಸೂಕ್ತ ಜಾಮೀನಿನ ಮೇಲೆ

ಬಿಡುಗಡೆಗಾಗಿ ಆದೇಶ ಮಾಡಿದ್ದು ಅದರಂತೆ ಸಂಬಂಧಪಟ್ಟ ನ್ಯಾಯಾಲಯದ ಪಿ.ಸಿ.ಯವರಿಂದ ಮಾಹಿತಿ ದೊರೆತ್ತಿದ್ದು ಅದರಂತೆ ಸದ್ರಿ ಆರೋಪಿಗಳನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ.

ತನಿಖೆ ಮುಂದುವರೆಸಿ ದಿನಾಂಕ **18.06.2016** ರಂದು ತನಿಖೆ ಪೂರ್ಣಗೊಳಿಸಿ ಆರೋಪಿಗಳ ವಿರುದ್ದ ಆರೋಪ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವುದು ಆರೋಪಿತರ ದಸ್ತಗಿರಿ ಮಹಜರ್ ನ ಟ್ರೂ ಕಾಪಿ ನಿಪಿ.**9,** ಸ್ವತ್ತು ಸ್ವಾಧೀನತಾ ಮಹಜರ್ ನ ಟ್ರೂ ಕಾಪಿಯನ್ನು ಎಂದು ಗುರುತಿಸಿಕೊಂಡಿದ್ದು ನಿಪಿ.**10,** ಆರೋಪಿಗಳು ತೋರಿಸಿಕೊಟ್ಟಂತೆ ತಕ್ಷೀರು ಸ್ಥಳದ ಮಹಜರ್ ನ ಟ್ರೂ ಕಾಪಿಯನ್ನು ನಿಪಿ.**11,**

ದ.ಪ್ರ.ಸಂ.**299** ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಸಿ.ಜೆ.ಎಮ್, ಉಡುಪಿ